ಇ) ಈ ರಸ್ತೆಗಳ ಸುಧಾರಣೆಗೆ ತಗಲಿದ ವೆಚ್ಚವೆಷ್ಟು? (ಜಿಲ್ಲಾವಾರು ಕಿ. ಮೀ ವಾರು ವಿವರ ನೀಡುವುದು)

ಈ) ಈ ರಸ್ತೆಗಳ ಸುಧಾರಣೆಗೆ ೧೯೯೨-೯೩ನೇ ಸಾಲಿಗೆ ಕಾಯ್ದಿರಿಸಿದ ಹಣವೆಷ್ಟು? (ಜಿಲ್ಲಾವಾರು, ಕಿ. ಮೀ. ವಾರು ವಿವರ ನೀಡುವುದು)

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಯಾವುದೂ ಇಲ್ಲ. ಆದರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ ೫೦ ಕಿ. ಮೀ. ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ ೧೮-೨-೧೯೯೨ ರಂದು ಹೊರಡಿಸಲಾಗಿದ್ದು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪಟ್ಟಿಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

## ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಕ್ಕಳಿಗೆ ವಿಷಮ ಜ್ವರ

ಶ್ರೀ ಹೆಚ್. ವಿಶ್ವನಾಥ್ (ಕೆ. ಆರ್. ನಗರ):- ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಕ್ಕಳಿಗೆ ಯಾವುದೋ ಒಂದು ವಿಧವಾದ ಜ್ವರ ಪ್ರಾರಂಭವಾಗಿ ಬಹಳ ಆತಂಕವಾದ ಪರಿಸ್ಥಿತಿ ಉಂಟಾಗಿದೆ. ನೂರಾರು ಮಕ್ಕಳು ಇವತ್ತು ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಆಸ್ಪತ್ರೆಯಲ್ಲಿರಲು ಜಾಗವಿಲ್ಲ ಮತ್ತು ಸರಿಯಾದ ರೀತಿಯಲ್ಲಿ ಚಿಕಿತ್ಸೆಯ ವ್ಯವಸ್ಥೆ ಇಲ್ಲದೆ ಮಕ್ಕಳ ಪೋಷಕರು ಅವರ ಮಕ್ಕಳನ್ನು ಮೈಸೂರು ಜಿಲ್ಲೆಯ ಆಸ್ಪತ್ರೆಗಳಿಗೆ ತೆಗೆದುಕೊಂಡು ಬಂದು ಚಿಕಿತ್ಸೆಯನ್ನು ಕೊಡಿಸುತ್ತಿದ್ದಾರೆ. ಇದರ ಬಗ್ಗೆ ಅಲ್ಲಿರತಕ್ಕ ಜಿಲ್ಲಾ ಆರೋಗ್ಯಾಧಿಕಾರಿಗಳು ಬಹಳ ಉದಾಸೀನರಾಗಿದ್ದಾರೆ. ಅದು ಯಾವ ಘಟ್ಟಕ್ಕೆ ಹೋಗಿದೆ ಎಂದರೆ ಬೇರೆ ಬೇರೆ ಕಡೆಗೆ ತಂದೆ ತಾಯಿಗಳು ಮಕ್ಕಳನ್ನು ಹೊತ್ತುಕೊಂಡು ಮೈಸೂರು ನಗರದಲ್ಲಿ ತಿರುಗಾಡುತ್ತಿದ್ದಾರೆ. ಆದುದರಿಂದ ತಕ್ಷಣ ಮಾನ್ಯ ಆರೋಗ್ಯ ಸಚಿವರು ಗುಂಡ್ಲುಪೇಟೆಗೆ ಧಾವಿಸಿ ಅಲ್ಲಿ ಸರಿಯಾದ ಚಿಕಿತ್ಸೆಗೆ ವ್ಯವಸ್ಥೆಯನ್ನು ಮಾಡಿ ಸಾವು ನೋವಿನ ತೂಗುಯ್ಯಾಲೆಯಲ್ಲಿರುವ ಮಕ್ಕಳ ಜೀವವನ್ನು ಬದುಕಿಸಲು ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಪ್ರಸ್ತಾಪ ಮಾಡುತ್ತಿದ್ದೇನೆ.

ನಿಯಮ ೬೫ರ ಕೆಳಗೆ ಚರ್ಚೆ

## ದಾವಣಗೆರೆ ನಗರ ಸಭೆಗೆ ವಿಶ್ವ ಬ್ಯಾಂಕ್‌ನಿಂದ ಧನ ಸಹಾಯ

ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):- ಸನ್ಮಾನ್ಯ ಅಧ್ಯಕ್ಷರೇ, ದಾವಣಗೆರೆ ನಗರ ಸಭೆಯ ವಿಶ್ವ ಬ್ಯಾಂಕಿನಿಂದ ೨೮ ಕೋಟಿ ರೂಪಾಯಿಗಳನ್ನು ವಿವಿಧ ಅಭಿವೃದ್ಧಿ ಯೋಜನೆಗಳನ್ನು